**ಕರ್ನಾಟಕ ಸರ್ಕಾರದ ನಡವಳಿ**

**ವಿಷಯ:** 2017-18 ನೇ ಸಾಲಿನ ಗಾಂಧಿ ಗ್ರಾಮ ಪುರಸ್ಕಾರ ಯೋಜನೆ ಅನುಷ್ಠಾನ ಮಾಡುವ ಬಗ್ಗೆ.

**ಓದಲಾಗಿದೆ:** ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 450 ಗ್ರಾಪಂಅ 2016, ದಿನಾಂಕ 23.05.2016

**ಪ್ರಸ್ತಾವನೆ:**

ಕರ್ನಾಟಕದ ಪಂಚಾಯತ್ ರಾಜ್ ವ್ಯವಸ್ಥೆಯಡಿ ವಿನೂತನ ಶೈಲಿಯಲ್ಲಿ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದ್ದು, ಪಂಚಾಯತ್ ರಾಜ್ ವ್ಯವಸ್ಥೆಯಡಿ ರಾಜ್ಯ ಸರ್ಕಾರವು ತನ್ನ ಬದ್ಧತೆಯನ್ನು ಪ್ರದರ್ಶಿಸುತ್ತಿದೆ. ರಾಜ್ಯದ ಪಂಚಾಯತ್ ಸಂಸ್ಥೆಗಳ ಆಡಳಿತ ವ್ಯವಸ್ಥೆಯಲ್ಲಿ ಮತ್ತಷ್ಟು ಪಾರದರ್ಶಕತೆ, ಉತ್ತರದಾಯಿತ್ವ ತರುವ ಉಪಕ್ರಮಗಳಿಗಾಗಿ ಈಗಾಗಲೇ ಹಲವಾರು ಉತ್ತೇಜನ ಕ್ರಮಗಳನ್ನು ಅನುಸರಿಸಲಾಗುತ್ತಿದೆ. ಉತ್ತೇಜನ ಕ್ರಮಗಳ ಒಂದು ಭಾಗವಾಗಿ 2013-14ರಿಂದ ಗ್ರಾಮ ಪಂಚಾಯತಿಗಳು ಸಾಧಿಸುವ ಶೇಕಡಾ 90 ರಿಂದ ಶೇಕಡಾ 95ರಷ್ಟು ಸಾಧನೆಯನ್ನು ಮೌಲ್ಯಮಾಪನ ಮಾಡಿ ರಾಜ್ಯದಲ್ಲಿ ಉತ್ತಮ ಕಾರ್ಯ ಸಾಧನೆ ಮಾಡಿರುವ ಗ್ರಾಮ ಪಂಚಾಯತಿಗಳನ್ನು ಪ್ರತಿ ತಾಲ್ಲೂಕಿಗೆ ಒಂದರಂತೆ ಗುರುತಿಸಿ, ಗಾಂಧಿ ಗ್ರಾಮ ಪುರಸ್ಕಾರ ಪ್ರದಾನ ಮಾಡುವ ಜೊತೆಗೆ ರೂ.5.00 ಲಕ್ಷಗಳ ಪ್ರೋತ್ಸಾಹಧನ ನೀಡಿ ಗೌರವಿಸಲಾಗುತ್ತಿದೆ. ಈ ಗ್ರಾಮ ಪಂಚಾಯತಿಗಳು ಮತ್ತಷ್ಟು ಉತ್ತಮ ಕೆಲಸಗಳನ್ನು ಹಾಗೂ ವಿಶೇಷ ಸಾಧನೆಗಳನ್ನು ಮಾಡಿ ಈ ಗ್ರಾಮ ಪಂಚಾಯತಿಗಳು ಇತರೆ ಗ್ರಾಮ ಪಂಚಾಯತಿಗಳಿಗೂ ಮಾದರಿಯಾಗಿ ನಿಲ್ಲುವುದು ಈ ಯೋಜನೆಯ ಆಶಯವಾಗಿದೆ.

ಗಾಂಧಿ ಗ್ರಾಮ ಪುರಸ್ಕಾರಕ್ಕಾಗಿ ಗ್ರಾಮ ಪಂಚಾಯತಿಗಳನ್ನು ಆಯ್ಕೆ ಮಾಡಲು ಪಂಚತಂತ್ರ ತಂತ್ರಾಂಶದ ಮೂಲಕ ವಿವಿಧ ಮಾನದಂಡಗಳನ್ನು ನಿಗಧಿಪಡಿಸಿ, ರಾಜ್ಯದ ಎಲ್ಲಾ ಗ್ರಾಮ ಪಂಚಾಯತಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗುತ್ತದೆ. ಈ ತಂತ್ರಾಂಶದ ಮುಖಾಂತರ ಉತ್ತರಿಸಿ, ಪ್ರತಿ ತಾಲ್ಲೂಕಿಗೆ ಅತಿ ಹೆಚ್ಚು ಅಂಕ ಗಳಿಸಿರುವ ಮೂರು ಗ್ರಾಮ ಪಂಚಾಯತಿಗಳು ಅರ್ಹತೆ ಪಡೆಯಲಿವೆ. ಅರ್ಹತೆ ಪಡೆದ ಗ್ರಾಮ ಪಂಚಾಯತಿಗಳ ಸ್ಥಳ ಹಾಗೂ ದಾಖಲಾತಿ ಪರಿಶೀಲನೆ ಮಾಡಿ, ಆಯಾ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧ್ಯಕ್ಷತೆಯಲ್ಲಿನ ಜಿಲ್ಲಾ ಮಟ್ಟದ ಆಯ್ಕೆ ಸಮಿತಿಯ ಮೂಲಕ ತಾಲ್ಲೂಕಿಗೆ ಒಂದರಂತೆ ಗ್ರಾಮ ಪಂಚಾಯತಿಗಳನ್ನು ಆಯ್ಕೆ ಮಾಡಿ ಸರ್ಕಾರಕ್ಕೆ ಸಲ್ಲಿಸಲಾಗುತ್ತದೆ. ಸರ್ಕಾರಕ್ಕೆ ಸಲ್ಲಿಕೆಯಾದ ಪ್ರಸ್ತಾವನೆಗಳನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು(ಪ.ರಾಜ್) ರವರ ಅಧ್ಯಕ್ಷತೆಯಲ್ಲಿನ ರಾಜ್ಯ ಮಟ್ಟದ ಪರಾಮರ್ಶೆ ಸಮಿತಿಯ ಮೂಲಕ ಅಂತಿಮಗೊಳಿಸಲಾಗುತ್ತದೆ.

ಅದರಂತೆ ಪ್ರಸ್ತುತ, ಗ್ರಾಮ ಪಂಚಾಯತಿಗಳ ಉತ್ತಮ ಕಾರ್ಯನಿರ್ವಹಣೆಯನ್ನು ಪ್ರೋತ್ಸಾಹಿಸಲು 2017-18ನೇ ಸಾಲಿಗೆ ಪ್ರತಿ ತಾಲ್ಲೂಕಿಗೆ ಒಂದರಂತೆ ಗ್ರಾಮ ಪಂಚಾಯತಿಗಳನ್ನು ಆಯ್ಕೆ ಮಾಡಿ, ಗಾಂಧಿ ಗ್ರಾಮ ಪುರಸ್ಕಾರ ನೀಡಿ ರೂ.5.00 ಲಕ್ಷಗಳ ಪ್ರಶಸ್ತಿ ಹಣ ಬಿಡುಗಡೆ ಮಾಡಿ ಗೌರವಿಸಲು ಸರ್ಕಾರವು ನಿರ್ಧರಿಸಿದೆ. ಆದರಂತೆ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 499 ಗ್ರಾಪಂಅ 2018, ಬೆಂಗಳೂರು, ದಿನಾಂಕ 25.07.2018**

1. 2017-18ನೇ ಸಾಲಿನ ಗಾಂಧಿ ಗ್ರಾಮ ಪುರಸ್ಕಾರಕ್ಕಾಗಿ ಅರ್ಹತೆ ಪಡೆಯಲು ಗ್ರಾಮ ಪಂಚಾಯತಿಗಳು 'ಗಾಂಧಿ ಗ್ರಾಮ ಪುರಸ್ಕಾರ ಯೋಜನೆಗಾಗಿ ಅರ್ಜಿ' ಶೀರ್ಷಿಕೆಯಡಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಪಂಚತಂತ್ರ ತಂತ್ರಾಂಶದಲ್ಲಿ ಲಭ್ಯಗೊಳಿಸಲಾಗುವ ಸಾಂಖ್ಯಿಕ ಮತ್ತು ಪ್ರಗತಿ ಸೂಚ್ಯಂಕಗಳ ಪ್ರಶ್ನೆಗಳಿಗೆ ಉತ್ತರಿಸುವ ಮೂಲಕ ಅರ್ಜಿಗಳನ್ನು ಸಲ್ಲಿಸತಕ್ಕದ್ದು. (ಅನುಬಂಧ ಲಗತ್ತಿಸಿದೆ. ಒಟ್ಟು 150 ಅಂಕಗಳು)

2. ಪ್ರತಿ ತಾಲ್ಲೂಕಿನಲ್ಲಿ ಅತಿ ಹೆಚ್ಚು ಅಂಕ ಪಡೆದ ಮೂರು ಗ್ರಾಮ ಪಂಚಾಯತಿಗಳು ಪುರಸ್ಕಾರಕ್ಕೆ ಅರ್ಹತೆ ಪಡೆಯಲಿವೆ. ಈ ಗ್ರಾಮ ಪಂಚಾಯತಿಗಳ ವಿವರಗಳನ್ನು ಆಯಾ ಜಿಲ್ಲಾ ಪಂಚಾಯತಿಗಳಿಗೆ ಕಳುಹಿಸಿಕೊಡಲಾಗುವುದು. (ಈ ಮೂರು ಗ್ರಾಮ ಪಂಚಾಯತಿಗಳಲ್ಲಿ ಸಮಾನ ಅಂಕಗಳನ್ನು ಪಡೆದಿದ್ದಲ್ಲಿ ಗ್ರಾಮ ಪಂಚಾಯತಿಗಳ ಸಂಖ್ಯೆ ಸಂದರ್ಭಾನುಸಾರ ಹೆಚ್ಚಾಗಬಹುದು)
3. ಮೇಲೆ ಓದಲಾದ ಸರ್ಕಾರದ ಆದೇಶದಲ್ಲಿನ ಮಾರ್ಗಸೂಚಿಗಳನ್ನು ಅನುಸರಿಸಿ, ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಅಧ್ಯಕ್ಷತೆಯಲ್ಲಿನ ಜಿಲ್ಲಾ ಪರಿಶೀಲನಾ/ಆಯ್ಕೆ ಸಮಿತಿಯು ಪುರಸ್ಕಾರಕ್ಕೆ ಅರ್ಹತೆ ಪಡೆದ ಪ್ರತಿ ತಾಲ್ಲೂಕಿಗೆ ಮೂರು ಗ್ರಾಮ ಪಂಚಾಯತಿಗಳಲ್ಲಿ ಪ್ರತಿ ತಾಲ್ಲೂಕಿಗೆ ಒಂದು ಗ್ರಾಮ ಪಂಚಾಯತಿಯನ್ನು 2017–18ನೇ ಸಾಲಿನ ಗಾಂಧಿ ಗ್ರಾಮ ಪುರಸ್ಕಾರಕ್ಕಾಗಿ ಆಯ್ಕೆ ಮಾಡುವುದು.
4. ಕ್ರಮ ಸಂಖ್ಯೆ (3)ರಂತೆ ಆಯ್ಕೆ ಮಾಡಲಾದ ಗ್ರಾಮ ಪಂಚಾಯತಿಗಳಿಗೆ ಸಾರ್ವಜನಿಕರಿಂದ ಆಕ್ಷೇಪಣೆಗಳನ್ನು ಆಹ್ವಾನಿಸಿ, ಆಕ್ಷೇಪಣೆಗಳನ್ನು ಇತ್ಯರ್ಥಗೊಳಿಸಿ, ನಂತರ ಪ್ರತಿ ತಾಲ್ಲೂಕಿಗೆ ಒಂದರಂತೆ ಗ್ರಾಮ ಪಂಚಾಯತಿಗಳನ್ನು ಪುರಸ್ಕಾರಕ್ಕಾಗಿ ಜಿಲ್ಲಾ ಮಟ್ಟದಲ್ಲಿ ಅಂತಿಮಗೊಳಿಸಿ ಸ್ಪಷ್ಟ ಅಭಿಪ್ರಾಯದೊಂದಿಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವುದು.
5. ಈ ರೀತಿ ಸಲ್ಲಿಕೆಯಾದ ಪ್ರಸ್ತಾವನೆಗಳನ್ನು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು(ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ನೇತೃತ್ವದ ರಾಜ್ಯ ಮಟ್ಟದ ಪರಾಮರ್ಶೆ ಸಮಿತಿಯಲ್ಲಿ 2017–18ನೇ ಸಾಲಿನ ಗಾಂಧಿ ಗ್ರಾಮ ಪುರಸ್ಕಾರಕ್ಕೆ ಗ್ರಾಮ ಪಂಚಾಯತಿಗಳನ್ನು ಅಂತಿಮಗೊಳಿಸಲಾಗುವುದು.
6. 2017–18 ನೇ ಸಾಲಿನ ಗಾಂಧಿ ಗ್ರಾಮ ಪುರಸ್ಕಾರಕ್ಕೆ ಆಯ್ಕೆಯಾದ ಗ್ರಾಮ ಪಂಚಾಯತಿಗಳಿಗೆ ಪ್ರತಿ ವರ್ಷದಂತೆ ಅಕ್ಟೋಬರ್ 2, 2018 ರ ಗಾಂಧಿ ಜಯಂತಿ ದಿನದಂದು ನಡೆಯುವ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು.

**ಅರ್ಜಿ ಸಲ್ಲಿಸಲು ಗೊತ್ತುಪಡಿಸಲಾದ ವೇಳಾಪಟ್ಟಿ:**

1. ಪಂಚತಂತ್ರ ತಂತ್ರಾಂಶದಲ್ಲಿ 2017–18ನೇ ಸಾಲಿನ ಗಾಂಧಿ ಗ್ರಾಮ ಪುರಸ್ಕಾರದ ಅರ್ಜಿಯ ಲಭ್ಯತೆ ಮತ್ತು ಗ್ರಾಮ ಪಂಚಾಯತಿಗಳು ಅರ್ಜಿಯನ್ನು ಸಲ್ಲಿಸುವ ಅವಧಿ:
   **ದಿನಾಂಕ 30.07.2018 ರಿಂದ 15.08.2018**
2. ಅರ್ಹತೆ ಪಡೆದ ತಾಲ್ಲೂಕಿಗೆ ಮೂರರಂತೆ ಗ್ರಾಮ ಪಂಚಾಯತಿಗಳ ವಿವರಗಳನ್ನು ಅರ್ಜಿ ಸಲ್ಲಿಸಲು ಇರುವ ಕೊನೆಯ ದಿನಾಂಕದ ನಂತರ ಜಿಲ್ಲಾ ಪಂಚಾಯತಿಗಳಿಗೆ ಕಳುಹಿಸಲಾಗುವುದು.
3. ಜಿಲ್ಲಾ ಮಟ್ಟದ ಪರಿಶೀಲನಾ/ಆಯ್ಕೆ ಸಮಿತಿಯು ಪ್ರತಿ ತಾಲ್ಲೂಕಿಗೆ ಒಂದರಂತೆ ಗ್ರಾಮ ಪಂಚಾಯತಿಗಳನ್ನು ಆಯ್ಕೆ ಮಾಡಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಕೊನೆಯ **ದಿನಾಂಕ 31.08.2018**

ಜಿಲ್ಲಾ ಪಂಚಾಯತಿಗಳಿಂದ ಪುರಸ್ಕಾರಕ್ಕಾಗಿ ಆಯ್ಕೆ ಮಾಡಿ ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಗುವ ಗ್ರಾಮ ಪಂಚಾಯತಿಗಳ ವ್ಯಾಪ್ತಿಯ ಎಲ್ಲಾ ಗ್ರಾಮಗಳಲ್ಲಿ ಮೂಲಭೂತ ಸೌಕರ್ಯಗಳಾದ ಕುಡಿಯುವ ನೀರು, ಬೀದಿದೀಪ, ಸ್ವಚ್ಛತೆ, ತಿಪ್ಪೆಗುಂಡಿಗಳ ಸ್ಥಳಾಂತರ, ರಸ್ತೆ ಬದಿಗಳು, ಸಾರ್ವಜನಿಕ ಸ್ಥಳಗಳು, ಗ್ರಾಮಗಳ ಒಟ್ಟಾರೆ ನೈರ್ಮಲ್ಯ ಹಾಗೂ ಸಮಗ್ರ ಸ್ವಚ್ಛತೆಯ ಕ್ರಮಗಳನ್ನು ಕೈಗೊಂಡು, ಪುರಸ್ಕಾರದ ಗೌರವಕ್ಕೆ ಧಕ್ಕೆ ಬಾರದಂತೆ ಹಾಗೂ ಪುರಸ್ಕಾರಕ್ಕೆ ಭಾಜನರಾಗುವ ಅಂತಹ ಗ್ರಾಮ ಪಂಚಾಯತಿಗಳ ಬಗ್ಗೆ ಮಾಧ್ಯಮಗಳು ಹಾಗೂ ಸಾರ್ವಜನಿಕ ವಲಯದಲ್ಲಿ ಸದಭಿಪ್ರಾಯ ಮೂಡುವಂತೆ ಆಯಾ ತಾಲ್ಲೂಕಿನ ಕಾರ್ಯನಿರ್ವಾಹಕ ಅಧಿಕಾರಿಗಳ ಮೇಲುಸ್ತುವಾರಿ ವಹಿಸಿ ಅಗತ್ಯ ಕ್ರಮ ಕೈಗೊಳ್ಳಲು ತಿಳಿಸಿದೆ.

ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಗ್ರಾಮ ಪಂಚಾಯತಿಗಳು ಹೆಚ್ಚಿನ ಸಂಖ್ಯೆಯಲ್ಲಿ ಪುರಸ್ಕಾರಕ್ಕೆ ಅರ್ಜಿ ಸಲ್ಲಿಸಲು ಸಂಬಂಧಪಟ್ಟವರಿಗೆ ಸೂಕ್ತ ನಿರ್ದೇಶನಗಳನ್ನು ನೀಡಿ, ಯೋಜನೆಯ ಸುಗಮ ಅನುಷ್ಠಾನಕ್ಕೆ ಸಂಪೂರ್ಣ ಸಹಕಾರ ನೀಡಲು ಕೋರಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

25/7/18

(ಎಂ.ಕೆ.ಕೆಂಪೇಗೌಡ)
ನಿರ್ದೇಶಕರು(ಪಂ.ರಾಜ್-1) ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಗೆ,

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
3. ಉಪನಿರ್ದೇಶಕರು, ರಾಜ್ಯ ಖಜಾನೆ ಗಣಕ ಕೋಶ, ಖನಿಜ ಭವನ, ಬೆಂಗಳೂರು.
4. ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವೆಚ್ಚ-5. ವಿಧಾನಸೌಧ, ಬೆಂಗಳೂರು.
5. ನಿರ್ದೇಶಕರು(ಪಂ.ರಾಜ್-2), ಗ್ರಾ.ಅ.& ಪಂ.ರಾಜ್ ಇಲಾಖೆ, ಬೆಂಗಳೂರು.
6. ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾ.ಅ. ಮತ್ತು ಪಂ.ರಾಜ್ ಇಲಾಖೆ, ಬೆಂಗಳೂರು.
7. ಹಿರಿಯ ತಾಂತ್ರಿಕ ನಿರ್ದೇಶಕರು, ಎನ್.ಐ.ಸಿ., ಬೆಂಗಳೂರು – ಪಂಚತಂತ್ರ ತಂತ್ರಾಂಶದಲ್ಲಿ ಪ್ರಶ್ನಾವಳಿಗಳನ್ನು ಅಳವಡಿಸಲು ಅಗತ್ಯ ಕ್ರಮಕ್ಕಾಗಿ.
8. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಗಳು.
9. ಕಾರ್ಯನಿರ್ವಾಹಕ ಅಧಿಕಾರಿಗಳು, ರಾಜ್ಯದ ಎಲ್ಲಾ ತಾಲ್ಲೂಕು ಪಂಚಾಯತಿಗಳು.
10. ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ರಾಜ್ಯದ ಎಲ್ಲಾ ಗ್ರಾಮ ಪಂಚಾಯತಿಗಳು (ಆಯಾ ತಾಲ್ಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿಗಳ ಮುಖಾಂತರ).
11. ಕರ್ನಾಟಕ ವಿಕಾಸ – ಮಾಸಪತ್ರಿಕೆಯಲ್ಲಿ ಪ್ರಕಟಣೆಗಾಗಿ.
12. ಗಣಕ ಕೋಶ – ಇಲಾಖಾ ವೆಬ್‌ಸೈಟ್‌ನಲ್ಲಿ ಅಳವಡಿಸಲು.
13. ಶಾಖಾ ರಕ್ಷಾಕಡತಕ್ಕೆ / ಹೆಚ್ಚುವರಿ ಪ್ರತಿ

<u>ಪ್ರತಿಯನ್ನು ಮಾಹಿತಿಗಾಗಿ :</u>

1. ಸನ್ಮಾನ್ಯ ಗ್ರಾ.ಅ. ಮತ್ತು ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಕಾಸ ಸೌಧ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು(ಪಂ.ರಾಜ್), ಗ್ರಾ.ಅ. ಮತ್ತು ಪಂ.ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳು, ಬಹುಮಹಡಿಗಳ ಕಟ್ಟಡ, ಬೆಂಗಳೂರು.

**ಅನುಬಂಧ**

## 2017-18 ನೇ ಸಾಲಿನ ಸಾಧನೆಗಳನ್ನು ಪರಿಗಣಿಸಿ ಗಾಂಧಿ ಗ್ರಾಮ ಪುರಸ್ಕಾರಕ್ಕಾಗಿ ಗ್ರಾಮ ಪಂಚಾಯತಿಗಳನ್ನು ಆಯ್ಕೆ ಮಾಡಲು ನಿಗಧಿಪಡಿರುವ ಪ್ರಶ್ನಾವಳಿಗಳು

**(ಒಟ್ಟು ಅಂಕಗಳು - 150)**

| ಕ್ರ.ಸಂ | ಮಾನದಂಡಗಳು | ನಿಗಧಿಪಡಿಸಲಾದ ಅಂಶಗಳು |
|---|---|---|
| 1 | 2 | 3 |
| 1 | ವೈಯಕ್ತಿಕ ಶೌಚಾಲಯಗಳ ನಿರ್ಮಾಣ (ಗುರಿಗಳ ಎದುರಾಗಿ)<br><br>ಗರಿಷ್ಠ ಅಂಕಗಳು - 5 | ಬಯಲು ಬಹಿರ್ದೆಸೆ ಮುಕ್ತ ಗ್ರಾಮ ಪಂಚಾಯತಿ ಆಗಿದ್ದಲ್ಲಿ - 5 |
| | | ಶೇ.70 ಕ್ಕಿಂತ ಹೆಚ್ಚು ಸಾಧನೆ - 4 |
| | | ಶೇ.50 ಕ್ಕಿಂತ ಹೆಚ್ಚು ಮತ್ತು ಶೇ.70ಕ್ಕಿಂತ ಕಡಿಮೆ - 3 |
| | | ಶೇ.30 ಕ್ಕಿಂತ ಹೆಚ್ಚು ಮತ್ತು ಶೇ.50ಕ್ಕಿಂತ ಕಡಿಮೆ - 2 |
| | | ಶೇ.30ಕ್ಕಿಂತ ಕಡಿಮೆ ಸಾಧನೆ- 1 |
| 2 | ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ ಒದಗಿಸಲಾದ ಪ್ರತಿಶತ ಉದ್ಯೋಗಗಳು, ಮಾನವದಿನಗಳು, ಆಸ್ತಿ ನಿರ್ಮಾಣ ಮತ್ತು ಅನುದಾನ ವಿನಿಯೋಗ.<br><br>ಗರಿಷ್ಟ ಅಂಕಗಳು - 5 | ಶೇ.90 ಕ್ಕಿಂತ ಹೆಚ್ಚು - 5 |
| | | ಶೇ.75ಕ್ಕಿಂತ ಹೆಚ್ಚು 90ಕ್ಕಿಂತ ಕಡಿಮೆ - 3 |
| | | ಶೇ.50 ಕ್ಕಿಂತ ಹೆಚ್ಚು 75ಕ್ಕಿಂತ ಕಡಿಮೆ - 2 |
| | | ಶೇ.50ಕ್ಕಿಂತ ಕಡಿಮೆ - 1 |
| 3 | ಮ.ಗಾಂ.ರಾ.ಗ್ರಾ.ಉ.ಖಾತರಿ ಯೋಜನೆಯ ನಿಯಮಗಳಿಗನುಗುಣವಾಗಿ ನೈಸರ್ಗಿಕ ಸಂಪನ್ಮೂಲ ನಿರ್ವಹಣೆ.<br><br>ಗರಿಷ್ಟ ಅಂಕಗಳು - 2 | ಕ್ರಿಯಾಯೋಜನೆಯಲ್ಲಿ ನೈಸರ್ಗಿಕ ಸಂಪನ್ಮೂಲ ನಿರ್ವಹಣೆಗೆ ಶೇ.60 ರಷ್ಟು ನಿಗಧಿಪಡಿಸಿ, ಅನುಷ್ಠಾನಗೊಳಿಸಲಾಗಿದೆಯೇ?<br>ಹೌದು – 2, ಇಲ್ಲ - 0 |
| 4 | ಗ್ರಾಮೀಣ ಜನತೆಗೆ ಒದಗಿಸಲಾದ ಮೂಲಭೂತ ಸೌಕರ್ಯಗಳು<br><br>ಗರಿಷ್ಟ ಅಂಕಗಳು - 3 | ಶೇ.100 ರಷ್ಟು ಕುಡಿಯುವ ನೀರು ವಿತರಣೆ ಕೊಳಾಯಿ ಮೂಲಕ.<br>ಆಗಿದೆ – 1, ಆಗಿಲ್ಲ – 0 |
| | | ಶೇ.100 ರಷ್ಟು ಬೀದಿ ದೀಪ ಅಳವಡಿಕೆ ಮತ್ತು ನಿರ್ವಹಣೆ .<br>ಆಗಿದೆ – 1, ಆಗಿಲ್ಲ – 0 |
| | | ಶುದ್ಧ ಕುಡಿಯುವ ನೀರಿನ ಘಟಕ.<br>ಇದೆ - 1, ಇಲ್ಲ – 0 |

| | | |
|---|---|---|
| 5 | ವಸತಿ ಯೋಜನೆಗಳ ಅನುಷ್ಠಾನ<br><br>ಗರಿಷ್ಟ ಅಂಕಗಳು - 5 | ಕಳೆದ ಮೂರು ವರ್ಷಗಳಲ್ಲಿ ವಸತಿ ಯೋಜನೆಗಳ ಗುರಿಗೆ ಎದುರಾಗಿ ಮನೆ ಒದಗಿಸುವಿಕೆ ಪ್ರಮಾಣ ಶೇ.90ಕ್ಕಿಂತ ಹೆಚ್ಚಿದ್ದರೆ - 5 |
| | | ಕಳೆದ ಮೂರು ವರ್ಷಗಳಲ್ಲಿ ವಸತಿ ಯೋಜನೆಗಳ ಗುರಿಗೆ ಎದುರಾಗಿ ಮನೆ ಒದಗಿಸುವಿಕೆ ಪ್ರಮಾಣ ಶೇ.75ಕ್ಕಿಂತ ಹೆಚ್ಚಿದ್ದರೆ – 3 |
| | | ಕಳೆದ ಮೂರು ವರ್ಷಗಳಲ್ಲಿ ವಸತಿ ಯೋಜನೆಗಳ ಗುರಿಗೆ ಎದುರಾಗಿ ಮನೆ ಒದಗಿಸುವಿಕೆ ಪ್ರಮಾಣ ಶೇ.50ಕ್ಕಿಂತ ಹೆಚ್ಚಿದ್ದರೆ – 2 |
| | | ಕಳೆದ ಮೂರು ವರ್ಷಗಳಲ್ಲಿ ವಸತಿ ಯೋಜನೆಗಳ ಗುರಿಗೆ ಎದುರಾಗಿ ಮನೆ ಒದಗಿಸುವಿಕೆ ಪ್ರಮಾಣ ಶೇ.50ಕ್ಕಿಂತ ಕಡಿಮೆ ಇದ್ದರೆ - 1 |
| 6 | ನೈರ್ಮಲ್ಯೀಕರಣ.<br><br>ಗರಿಷ್ಠ ಅಂಕಗಳು - 5 | ಚರಂಡಿಗಳ ನಿರ್ಮಾಣ ಮತ್ತು ಸಮರ್ಪಕ ನಿರ್ವಹಣೆ.<br>ಇದೆ - 1, ಇಲ್ಲ - 0 |
| | | ಮನೆಗಳು, ಬೀದಿಗಳಿಂದ ಕಸ ಸಂಗಹ್ರಣೆ ಮಾಡಲಾಗುತ್ತಿದೆಯೇ?<br>ಇದೆ - 1, ಇಲ್ಲ - 0 |
| | | ಕಸ ವಿಂಗಡಣೆ ಮಾಡಲಾಗುತ್ತಿದೆಯೇ?<br>ಇದೆ - 1, ಇಲ್ಲ - 0 |
| | | ಸಮರ್ಪಕ ಕಸ ವಿಲೇವಾರಿ ಮಾಡಲಾಗುತ್ತಿದೆಯೇ?<br>ಇದೆ - 1, ಇಲ್ಲ - 0 |
| | | ಘನ ಮತ್ತು ದ್ರವ ತ್ಯಾಜ್ಯ ವಿಲೇವಾರಿ ಘಟಕ ಇದೆಯೇ?<br>ಇದೆ - 1, ಇಲ್ಲ – 0 |
| 7 | 14 ನೇ ಹಣಕಾಸು ಆಯೋಗ ಅನುದಾನ ವಿನಿಯೋಗ (ಕ್ರಿಯಾಯೋಜನೆ ಮತ್ತು ಮಾರ್ಗಸೂಚಿಗಳಿಗನುಗುಣವಾಗಿ)<br><br>ಗರಿಷ್ಟ ಅಂಕಗಳು – 4 | ಶೇ.90 ಕ್ಕಿಂತ ಹೆಚ್ಚು ಸಾಧನೆ – 4 |
| | | ಶೇ.75 ಕ್ಕಿಂತ ಹೆಚ್ಚು ಮತ್ತು ಶೇ.90 ಕ್ಕಿಂತ ಕಡಿಮೆ ಸಾಧನೆ - 3 |
| | | ಶೇ.50 ಕ್ಕಿಂತ ಹೆಚ್ಚು ಮತ್ತು ಶೇ.75 ಕ್ಕಿಂತ ಕಡಿಮೆ ಸಾಧನೆ - 1 |
| | | ಶೇ.50 ಕ್ಕಿಂತ ಕಡಿಮೆ ಸಾಧನೆ - 0 |
| 8 | 14 ನೇ ಹಣಕಾಸು ಆಯೋಗದ ಕಾರ್ಯ ಕ್ಷಮತೆ ಅನುದಾನ ಪಡೆಯಲಾಗಿದೆಯೇ? (Performance Grants)<br>ಗರಿಷ್ಟ ಅಂಕಗಳು - 1 | ಹೌದು – 1,<br>ಇಲ್ಲ - 0 |
| 9 | ಶಾಸನಬದ್ಧ ಅನುದಾನ ವಿನಿಯೋಗ (ಕ್ರಿಯಾಯೋಜನೆ ಮತ್ತು ಮಾರ್ಗಸೂಚಿಗಳಿಗನುಗುಣವಾಗಿ)<br><br>ಗರಿಷ್ಟ ಅಂಕಗಳು - 4 | ಶೇ.90 ಕ್ಕಿಂತ ಹೆಚ್ಚು ಸಾಧನೆ – 4 |
| | | ಶೇ.75 ಕ್ಕಿಂತ ಹೆಚ್ಚು ಮತ್ತು ಶೇ.90 ಕ್ಕಿಂತ ಕಡಿಮೆ ಸಾಧನೆ - 2 |
| | | ಶೇ.50 ಕ್ಕಿಂತ ಹೆಚ್ಚು ಮತ್ತು ಶೇ.75 ಕ್ಕಿಂತ ಕಡಿಮೆ ಸಾಧನೆ - 1 |
| | | ಶೇ.50 ಕ್ಕಿಂತ ಕಡಿಮೆ ಸಾಧನೆ-0 |

| | | |
|---|---|---|
| 10 | 2017-18 ನೇ ಸಾಲಿನ ಗ್ರಾಮ ಪಂಚಾಯತಿ ಮಾಸಿಕ ಸಭೆಗಳು ಮತ್ತು ಈ ಸಭೆಗಳ ನಡವಳಿಗಳನ್ನು ಪಂಚತಂತ್ರ ತಂತ್ರಾಂಶದಲ್ಲಿ ಅಳವಡಿಸಿರುವುದು.<br><br>ಗರಿಷ್ಟ ಅಂಕಗಳು - 5 | ಪ್ರತಿ ಮಾಹೆ ಸಾಮಾನ್ಯ ಸಭೆಯನ್ನು ನಡೆಸಲಾಗಿದೆಯೇ?<br>10 ರಿಂದ 12 ನಡೆಸಿದ್ದಲ್ಲಿ – 1<br>10 ಕ್ಕಿಂತ ಕಡಿಮೆ - 0 |
| | | ಗ್ರಾಮ ಪಂಚಾಯತಿ ಮಾಸಿಕ ಸಭೆಗಳ ನಡವಳಿಗಳನ್ನು ಪಂಚತಂತ್ರ ತಂತ್ರಾಂಶದಲ್ಲಿ ಅಳವಡಿಸಲಾಗಿದೆಯೇ?<br>ಹೌದು – 1, ಇಲ್ಲ - 0 |
| | | ಸಾಮಾನ್ಯ ಸಭೆಗಳ ನಡವಳಿಯ ಪ್ರತಿಯನ್ನು ಗ್ರಾಮ ಪಂಚಾಯತಿಯ ಸೂಚನಾ ಫಲಕದ ಮೇಲೆ ಸಭೆ ನಡೆದ ಮೂರು ದಿನಗಳೊಳಗಾಗಿ ಪ್ರತಿ ಮಾಹೆ ಪ್ರದರ್ಶಿಸಲಾಗಿದೆಯೇ?<br>ಹೌದು – 1, ಇಲ್ಲ - 0 |
| | | ಸಾಮಾನ್ಯ ಸಭೆಗಳ ನಡವಳಿಯ ಪ್ರತಿಯನ್ನು ಸಭೆ ನಡೆದ ಹತ್ತು ದಿನಗಳೊಳಗಾಗಿ ಪ್ರತಿ ಮಾಹೆ ತಾಲ್ಲೂಕು ಪಂಚಾಯತಿ ಕಾರ್ಯ ನಿರ್ವಾಹಕ ಅಧಿಕಾರಿಯವರಿಗೆ ಪ್ರತಿ ಮಾಹೆ ಕಳುಹಿಸಲಾಗಿದೆಯೇ?<br>ಹೌದು – 1, ಇಲ್ಲ - 0 |
| | | ಹಿಂದಿನ ಸಾಮಾನ್ಯ ಸಭೆಯ ನಡವಳಿಗೆ ಅನುಪಾಲನಾ ಕ್ರಮಗಳನ್ನು ಪ್ರತಿ ಸಾಮಾನ್ಯ ಸಭೆಯಲ್ಲಿ ಮಂಡನೆ ಮಾಡಲಾಗುತ್ತಿದೆಯೇ?<br>ಹೌದು – 1, ಇಲ್ಲ – 0 |
| 11 | 2017-18 ನೇ ಸಾಲಿನಲ್ಲಿ ನಡೆಸಲಾದ ಗ್ರಾಮ ಸಭೆಗಳ ಸಂಖ್ಯೆ, ಗ್ರಾಮ ಸಭೆಗಳ ವಿಡಿಯೋ ಚಿತ್ರೀಕರಣ ಮತ್ತು ನಡವಳಿಗಳನ್ನು ಪಂಚತಂತ್ರ ತಂತ್ರಾಂಶದಲ್ಲಿ ಅಳವಡಿಸಿರುವುದು.<br><br>ಗರಿಷ್ಟ ಅಂಕಗಳು - 5 | ಗ್ರಾಮ ಸಭೆಗೆ ಮುಂಚಿತವಾಗಿ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ವಿಶೇಷ ಸಭೆಯನ್ನು ನಡೆಸಲಾಗಿದೆಯೇ?<br>ಹೌದು -1, ಇಲ್ಲ – 0 |
| | | ಗ್ರಾಮ ಸಭೆಗೆ ಮುಂಚಿತವಾಗಿ ಮಹಿಳಾ ವಿಶೇಷ ಸಭೆಯನ್ನು ನಡೆಸಲಾಗಿದೆಯೇ?<br>ಹೌದು -1, ಇಲ್ಲ - 0 |
| | | ಗ್ರಾಮ ಸಭೆಗೆ ಮುಂಚಿತವಾಗಿ ಮಕ್ಕಳ ವಿಶೇಷ ಸಭೆಯನ್ನು ನಡೆಸಲಾಗಿದೆಯೇ?<br>ಹೌದು -1, ಇಲ್ಲ – 0 |
| | | ಗ್ರಾಮ ಸಭೆಗಳ ವೀಡಿಯೋ ಮತ್ತು ನಡವಳಿಗಳನ್ನು ಪಂಚತಂತ್ರ ತಂತ್ರಾಂಶದಲ್ಲಿ ಅಳವಡಿಲಾಗಿದೆಯೇ?<br>ಹೌದು -1, ಇಲ್ಲ – 0 |
| | | ವಾರ್ಡ್ ಸಭೆಗಳನ್ನು ಶೇ.50 ಕ್ಕಿಂತ ಹೆಚ್ಚು ನಡೆಸಲಾಗಿದೆಯೇ?<br>ಹೌದು -1, ಇಲ್ಲ – 0 |

| | | |
|---|---|---|
| 12 | 2017-18 ನೇ ಸಾಲಿನ ಮಾಸಿಕ ಬ್ಯಾಂಕ್ ಲೆಕ್ಕ ಮರುಹೊಂದಾಣಿಕೆ (ಬಿ.ಆರ್.ಎಸ್.) ವರದಿಯನ್ನು ಪಂಚತಂತ್ರ ತಂತ್ರಾಂಶದಲ್ಲಿ ಅಳವಡಿಸಿರುವುದು.<br>ಗರಿಷ್ಟ ಅಂಕಗಳು - 3 | ಶಾಸನಬದ್ಧ ಅನುದಾನ ಖಾತೆ<br>ಹೌದು -1, ಇಲ್ಲ - 0 |
| | | 14 ನೇ ಹಣಕಾಸು ಆಯೋಗ ಅನುದಾನ ಖಾತೆ<br>ಹೌದು -1, ಇಲ್ಲ - 0 |
| | | ಸಿಬ್ಬಂದಿ ವೇತನ ಅನುದಾನ ಖಾತೆ<br>ಹೌದು -1, ಇಲ್ಲ - 0 |
| 13 | ಸ್ವಂತ ಸಂಪನ್ಮೂಲ ಸಂಗ್ರಹಣೆ<br>ಗರಿಷ್ಟ ಅಂಕ - 8 | ವಾರ್ಷಿಕ ಕಂದಾಯ ಬೇಡಿಕೆಯ ಶೇ.80 ರಷ್ಟು ವಸೂಲಾತಿ ಮಾಡಲಾಗಿದೆಯೇ?<br>ಹೌದು -2, ಇಲ್ಲ - 0 |
| | | 2016-17 ನೇ ಸಾಲಿಗೆ ಹೋಲಿಕೆ ಮಾಡಿದಲ್ಲಿ, 2017-18 ನೇ ಸಾಲಿನ ವಸೂಲಾತಿಯು ಹೆಚ್ಚಳವಾಗಿದೆಯೇ?<br>ಹೌದು -2, ಇಲ್ಲ - 0 |
| | | 2017-18 ನೇ ಸಾಲಿಗೆ ಹೊಸ ಆದಾಯ ಮೂಲಗಳನ್ನು ಗುರುತಿಸಿ, ಕಂದಾಯ ಮತ್ತು ಶುಲ್ಕಗಳನ್ನು ವಸೂಲಾತಿ ಮಾಡಲಾಗಿದೆಯೇ?<br>ಹೌದು -2, ಇಲ್ಲ - 0 |
| | | ಕ.ಪಂ.ರಾಜ್(2 ನೇ ತಿದ್ದುಪಡಿ) ಅಧಿನಿಯಮ 2015 ರ ಅನುಸೂಚಿ 4 ರಂತೆ ಗ್ರಾಮ ಪಂಚಾಯತಿ ಆಸ್ತಿಗಳ ತೆರಿಗೆ ಮತ್ತು ಶುಲ್ಕಗಳನ್ನು ಮರು ನಿಗಧಿಪಡಿಸಲಾಗಿದೆಯೇ?<br>ಹೌದು -2, ಇಲ್ಲ - 0 |
| 14 | ಗ್ರಾಮ ಪಂಚಾಯತಿಯ ಸ್ಥಾಯಿ ಸಮಿತಿಗಳು ಮತ್ತು ಉಪಸಮಿತಿಗಳನ್ನು ರಚಿಸಿರುವುದು, ಆಯೋಜಿಸಿರುವುದು ಮತ್ತು ನಡವಳಿಗಳನ್ನು ಪಂಚತಂತ್ರ ತಂತ್ರಾಂಶದಲ್ಲಿ ಅಳವಡಿಸಿರುವುದು. (ಸಾಮಾನ್ಯ ಸ್ಥಾಯಿ ಸಮಿತಿ, ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ಮತ್ತು ಹಣಕಾಸು, ಲೆಕ್ಕ ಪರಿಶೋಧನೆ ಮತ್ತು ಯೋಜನಾ ಸ್ಥಾಯಿ ಸಮಿತಿ)<br>ಗರಿಷ್ಠ ಅಂಕಗಳು-7 | ಸಾಮಾನ್ಯ ಸ್ಥಾಯಿ ಸಮಿತಿ ಸಭೆಗಳನ್ನು ನಡೆಸಲಾಗಿದೆಯೇ?<br>ಹೌದು – 1, ಇಲ್ಲ – 0 |
| | | ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ಸಭೆಗಳನ್ನು ನಡೆಸಲಾಗಿದೆಯೇ?<br>ಹೌದು – 1, ಇಲ್ಲ – 0 |
| | | ಹಣಕಾಸು, ಲೆಕ್ಕ ಪರಿಶೋಧನೆ ಮತ್ತು ಯೋಜನಾ ಸ್ಥಾಯಿ ಸಮಿತಿ ಸಭೆಗಳನ್ನು ನಡೆಸಲಾಗಿದೆಯೇ?<br>ಹೌದು – 1, ಇಲ್ಲ – 0 |
| | | ಸ್ಥಾಯಿ ಸಮಿತಿಗಳ ಸಭಾ ನಡವಳಿಗಳನ್ನು ಪಂಚತಂತ್ರ ತಂತ್ರಾಂಶದಲ್ಲಿ ಅಳವಡಿಸಲಾಗಿದೆಯೇ?<br>ಹೌದು – 1, ಇಲ್ಲ – 0 |
| | | ಉಪಸಮಿತಿಗಳನ್ನು ರಚಿಸಲಾಗಿದೆಯೇ?<br>ಹೌದು – 1, ಇಲ್ಲ – 0 |
| | | ಉಪಸಮಿತಿಗಳ ಸಭೆಗಳನ್ನು ನಡೆಸಲಾಗಿದೆಯೇ?<br>ಹೌದು – 1, ಇಲ್ಲ – 0 |
| | | ಉಪಸಮಿತಿಗಳ ಸಭಾ ನಡವಳಿಗಳನ್ನು ಪಂಚತಂತ್ರ ತಂತ್ರಾಂಶದಲ್ಲಿ ಅಳವಡಿಸಲಾಗಿದೆಯೇ?<br>ಹೌದು – 1, ಇಲ್ಲ – 0 |

| | | |
|---|---|---|
| 15 | ಗ್ರಾಮ ಪಂಚಾಯತಿ ಅಭಿವೃದ್ಧಿ ಯೋಜನೆ.<br><br>ಗರಿಷ್ಠ ಅಂಕಗಳು-5 | 2017-18 ನೇ ಸಾಲಿಗೆ 5 ವರ್ಷದ ದೂರದೃಷ್ಟಿ ಯೋಜನೆ ತಯಾರಿಸಲಾಗಿದೆಯೇ?<br>ಹೌದು – 2, ಇಲ್ಲ – 0 |
| | | ಪಂಚತಂತ್ರ ತಂತ್ರಾಂಶದಲ್ಲಿ ಅಳವಡಿಸಲಾಗಿದೆಯೇ?<br>ಹೌದು – 1, ಇಲ್ಲ – 0 |
| | | 2017-18 ನೇ ಸಾಲಿನ ಗ್ರಾಮ ಪಂಚಾಯತಿ ಅಭಿವೃದ್ಧಿ ಯೋಜನೆಯ ಸಾಧನೆಯನ್ನುಮುದ್ರಣ ಮಾಡಿ, ಗ್ರಾಮಸಭೆಗಳಲ್ಲಿ ವಿತರಿಸಲಾಗಿದೆಯೇ?<br>ಹೌದು – 2, ಇಲ್ಲ – 0 |
| 16 | ವಿವಿಧ ಯೋಜನೆಗಳಡಿ ಅನುಷ್ಠಾನಗೊಳಿಸಲಾದ ಎಲ್ಲಾ ಕಾಮಗಾರಿಗಳನ್ನು ಗಾಂಧಿ ಸಾಕ್ಷಿ ಕಾಯಕ ತಂತ್ರಾಂಶದಲ್ಲಿ ಅಳವಡಿಸಲಾಗಿದೆಯೇ?<br><br>ಗರಿಷ್ಠ ಅಂಕಗಳು-3 | ಶೇ.100 ರಷ್ಟು ಅಳವಡಿಸಿದ್ದಲ್ಲಿ – 3 |
| | | ಶೇ.75 ಕ್ಕಿಂತ ಶೇ.90 ರಷ್ಟು ಅಳವಡಿಸಿದ್ದಲ್ಲಿ – 2 |
| | | ಶೇ.75 ಕ್ಕಿಂತ ಕಡಿಮೆ ಅಳವಡಿಸಿದ್ದಲ್ಲಿ – 1 |
| 17 | ವಿವಿಧ ಯೋಜನೆಗಳ ಎಲ್ಲಾ ವಾರ್ಷಿಕ ಕ್ರಿಯಾ ಯೋಜನೆಗಳನ್ನು ಪಂಚತಂತ್ರ ತಂತ್ರಾಂಶದಲ್ಲಿ ಅಳವಡಿಸಲಾಗಿದೆಯೇ?<br><br>ಗರಿಷ್ಠ ಅಂಕಗಳು-3 | ಹೌದು – 3,<br>ಭಾಗಶಃ - 1<br>ಇಲ್ಲ – 0 |
| 18 | ಗ್ರಾಮ ಪಂಚಾಯತಿಗಳ ಆಸ್ತಿ ವಹಿಯಲ್ಲಿರುವ ಆಲ್ಲಾ ಆಸ್ತಿ ವಿವರಗಳನ್ನು ತಂತ್ರಾಂಶದಲ್ಲಿ ಅಳವಡಿಸಿರುವುದು.<br><br>ಗರಿಷ್ಠ ಅಂಕಗಳು-6 | ಗ್ರಾಮ ಪಂಚಾಯತಿಗಳ ಆಸ್ತಿ ವಹಿಯಲ್ಲಿರುವ ಆಲ್ಲಾ ಆಸ್ತಿ ವಿವರಗಳನ್ನು ತಂತ್ರಾಂಶದಲ್ಲಿ ಅಳವಡಿಸಲಾಗಿದೆಯೇ?<br>ಹೌದು – 3, ಇಲ್ಲ – 0 |
| | | ಪಂಚತಂತ್ರದಲ್ಲಿರುವ ಆಸ್ತಿಗಳ ಕಂದಾಯ ಬೇಡಿಕೆ ವಿವರಗಳಿಗೂ ಹಾಗೂ ಬೇಡಿಕೆ ವಹಿಗಳಲ್ಲಿರುವ ಆಸ್ತಿಗಳ ಕಂದಾಯ ಬೇಡಿಕೆಗಳ ವಾಸ್ತವ ವಿವರಗಳಿಗೂ ಹೊಂದಾಣಿಕೆ ಆಗುತ್ತದೆಯೇ?<br>ಹೌದು – 3, ಇಲ್ಲ – 0 |
| 19 | 2017-18 ನೇ ಸಾಲಿಗೆ ಗ್ರಾಮ ಪಂಚಾಯತಿ ಸ್ವಂತ ಅನುದಾನದಲ್ಲಿ ಪ.ಜಾ. ಮತ್ತು ಪ.ಪಂಗಡದವರ ಕಲ್ಯಾಣ ಕಾರ್ಯಕ್ರಮಗಳಿಗೆ ಮೀಸಲಿರಿಸಿದ ಶೇ.25 ರ ಅನುದಾನ ಬಳಕೆ.<br><br>ಗರಿಷ್ಠ ಅಂಕಗಳು-5 | ಶೇ.100 ರಷ್ಟು ಬಳಕೆ ಮಾಡಿದ್ದಲ್ಲಿ - 5 |
| | | ಶೇ.70 ಕ್ಕಿಂತ ಹೆಚ್ಚು ಬಳಕೆ ಮಾಡಿದ್ದಲ್ಲಿ - 3 |
| | | ಶೇ.50 ಕ್ಕಿಂತ ಹೆಚ್ಚು ಬಳಕೆ ಮಾಡಿದ್ದಲ್ಲಿ - 2 |
| | | ಶೇ.50 ಕ್ಕಿಂತ ಕಡಿಮೆ ಬಳಕೆ ಮಾಡಿದ್ದಲ್ಲಿ - 1 |

| | | |
|---|---|---|
| 20 | 2017-18 ನೇ ಸಾಲಿಗೆ ಗ್ರಾಮ ಪಂಚಾಯತಿ ಸ್ವಂತ ಅನುದಾನದಲ್ಲಿ ಅಂಗವಿಕಲರ ಕಲ್ಯಾಣ ಕಾರ್ಯಕ್ರಮಗಳಿಗೆ ಮೀಸಲಿರಿಸಿದ ಶೇ.3 ರ ಅನುದಾನ ಬಳಕೆ (ಮಾರ್ಗಸೂಚಿಗಳಿಗನುಗುಣವಾಗಿ)<br><br>ಗರಿಷ್ಠ ಅಂಕಗಳು-5 | ಶೇ.100 ರಷ್ಟು ಬಳಕೆ ಮಾಡಿದ್ದಲ್ಲಿ - 5<br>ಶೇ.70 ಕ್ಕಿಂತ ಹೆಚ್ಚು ಬಳಕೆ ಮಾಡಿದ್ದಲ್ಲಿ - 3<br>ಶೇ.50 ಕ್ಕಿಂತ ಹೆಚ್ಚು ಬಳಕೆ ಮಾಡಿದ್ದಲ್ಲಿ - 2<br>ಶೇ.50 ಕ್ಕಿಂತ ಕಡಿಮೆ ಬಳಕೆ ಮಾಡಿದ್ದಲ್ಲಿ - 1 |
| 21 | 2017-18 ನೇ ಸಾಲಿಗೆ ಗ್ರಾಮ ಪಂಚಾಯತಿ ಸ್ವಂತ ಅನುದಾನದಲ್ಲಿ ಕ್ರೀಡಾ ಕಾರ್ಯಕ್ರಮಗಳಿಗೆ ಮೀಸಲಿರಿಸಿದ ಶೇ.2 ರ ಅನುದಾನ ಬಳಕೆ (ಮಾರ್ಗಸೂಚಿಗಳಿಗನುಗುಣವಾಗಿ)<br><br>ಗರಿಷ್ಠ ಅಂಕಗಳು-5 | ಶೇ.100 ರಷ್ಟು ಬಳಕೆ ಮಾಡಿದ್ದಲ್ಲಿ - 5<br>ಶೇ.70 ಕ್ಕಿಂತ ಹೆಚ್ಚು ಬಳಕೆ ಮಾಡಿದ್ದಲ್ಲಿ - 3<br>ಶೇ.50 ಕ್ಕಿಂತ ಹೆಚ್ಚು ಬಳಕೆ ಮಾಡಿದ್ದಲ್ಲಿ - 2<br>ಶೇ.50 ಕ್ಕಿಂತ ಕಡಿಮೆ ಬಳಕೆ ಮಾಡಿದ್ದಲ್ಲಿ - 1 |
| 22 | 2017-18 ನೇ ಸಾಲಿಗೆ ಗ್ರಾಮ ಪಂಚಾಯತಿ ಸ್ವಂತ ಅನುದಾನದಲ್ಲಿ ಕ್ರೀಡಾ ಕಾರ್ಯಕ್ರಮಗಳು, ಅಂಗವಿಕಲರ ಕಲ್ಯಾಣ ಕಾರ್ಯಕ್ರಮಗಳು ಮತ್ತು ಪ.ಜಾ. ಮತ್ತು ಪ.ಪಂಗಡದವರ ಕಲ್ಯಾಣ ಕಾರ್ಯಕ್ರಮಗಳಿಗೆ ಮೀಸಲಿರಿಸಿದ ಅನುದಾನ ಬಳಕೆ ವಿವರಗಳನ್ನು ಪಂತತಂತ್ರ ತಂತ್ರಾಂಶದಲ್ಲಿ ಅಳವಡಿಸುವುದು.<br><br>ಗರಿಷ್ಠ ಅಂಕಗಳು - 3 | 2017-18 ನೇ ಸಾಲಿಗೆ ಗ್ರಾಮ ಪಂಚಾಯತಿ ಸ್ವಂತ ಅನುದಾನದಲ್ಲಿ ಕ್ರೀಡಾ ಕಾರ್ಯಕ್ರಮಗಳಿಗೆ ಮೀಸಲಿರಿಸಿದ ಅನುದಾನ ಬಳಕೆ ವಿವರಗಳನ್ನು ಪಂತತಂತ್ರ ತಂತ್ರಾಂಶದಲ್ಲಿ ಅಳವಡಿಸಲಾಗಿದೆಯೇ?<br>ಹೌದು – 1, ಇಲ್ಲ – 0<br>2017-18 ನೇ ಸಾಲಿಗೆ ಗ್ರಾಮ ಪಂಚಾಯತಿ ಸ್ವಂತ ಅನುದಾನದಲ್ಲಿ ಅಂಗವಿಕಲರ ಕಲ್ಯಾಣ ಕಾರ್ಯಕ್ರಮಗಳಿಗೆ ಮೀಸಲಿರಿಸಿದ ಅನುದಾನ ಬಳಕೆ ವಿವರಗಳನ್ನು ಪಂತತಂತ್ರ ತಂತ್ರಾಂಶದಲ್ಲಿ ಅಳವಡಿಸಲಾಗಿದೆಯೇ?<br>ಹೌದು – 1, ಇಲ್ಲ – 0<br>2017-18 ನೇ ಸಾಲಿಗೆ ಗ್ರಾಮ ಪಂಚಾಯತಿ ಸ್ವಂತ ಅನುದಾನದಲ್ಲಿ ಪ.ಜಾ. ಮತ್ತು ಪ.ಪಂಗಡದವರ ಕಲ್ಯಾಣ ಕಾರ್ಯಕ್ರಮಗಳಿಗೆ ಮೀಸಲಿರಿಸಿದ ಅನುದಾನ ಬಳಕೆ ವಿವರಗಳನ್ನು ಪಂತತಂತ್ರ ತಂತ್ರಾಂಶದಲ್ಲಿ ಅಳವಡಿಸುವುದು.<br>ಹೌದು – 1, ಇಲ್ಲ – 0 |
| 23 | ಗ್ರಾಮ ಪಂಚಾಯತಿ ಸಿಬ್ಬಂದಿಗಳ ಹಾಜರಾತಿಯನ್ನು ಬಯೋಮೆಟ್ರಿಕ್ (ಇ-ಹಾಜರಾತಿ) ಪದ್ಧತಿಯಲ್ಲಿ ಕಡ್ಡಾಯವಾಗಿ ನಿರ್ವಹಿಸುತ್ತಿರುವುದು.<br><br>ಗರಿಷ್ಠ ಅಂಕಗಳು-4 | ಹೌದು – 4<br>ಭಾಗಶಃ -2<br>ಇಲ್ಲ – 0 |

| | | |
|---|---|---|
| 24 | ಸಕಾಲ ಸೇವೆಗಳು.<br><br>ಗರಿಷ್ಟ ಅಂಕಗಳು - 2 | ನಿಗಧಿತ ಕಾಲದಲ್ಲಿ ಸೇವೆಗಳನ್ನು ಒದಗಿಸಿರುವುದು – 2<br>ನಿಗಧಿತ ಕಾಲದಲ್ಲಿ ಸೇವೆಗಳನ್ನು ಒದಗಿಸದಿರುವುದು ಮತ್ತು ದಂಡನೆಗೆ ಒಳಗಾಗಿರುವುದು - 0 |
| 25 | ಜಮಾಬಂಧಿ<br><br>ಗರಿಷ್ಠ ಅಂಗಳು-4 | ನಿಗಧಿತ ಕಾಲಾವಧಿಯಲ್ಲಿ ಜಮಾಬಂಧಿ ನಡೆಸಲಾಗಿದೆಯೇ?<br>ಹೌದು – 2, ಇಲ್ಲ – 0<br>ಜಮಾಬಂಧಿ ಸಭೆ ನಡವಳಿಗೆ ಅನುಪಾಲನಾ ಕ್ರಮಗಳನ್ನು ನಿರ್ವಹಿಸಲಾಗಿದೆಯೇ?<br>ಹೌದು – 1, ಇಲ್ಲ – 0<br>ಜಮಾಬಂಧಿ ಸಭಾ ನಡವಳಿಗಳನ್ನು ಹಾಗೂ ಅನುಪಾಲನಾ ವರದಿಗಳನ್ನು ಪಂಚತಂತ್ರ ತಂತ್ರಾಂಶದಲ್ಲಿ ಅಳವಡಿಸಲಾಗಿದೆಯೇ?<br>ಹೌದು – 1, ಇಲ್ಲ – 0 |
| 26 | ಗ್ರಾಮ ಪಂಚಾಯತಿ ಆಸ್ತಿಗಳ ಒತ್ತುವರಿಗಳನ್ನು ತೆರವುಗೊಳಿಸಿರುವುದು.<br><br>ಗರಿಷ್ಟ ಅಂಕಗಳು - 4 | ಹೌದು – 4<br>ಭಾಗಶ: - 2<br>ಇಲ್ಲಾ - 0 |
| 27 | ಮಾಹಿತಿ ಹಕ್ಕು ಅಧಿನಿಯಮ 2005 ರನ್ವಯ ಸಾರ್ವಜನಿಕ ಮಾಹಿತಿ ಅಧಿಕಾರಿಗಳ ವಿವರಗಳನ್ನು ಹಾಗೂ ಸಕಾಲ ಸೇವೆಗಳ ವಿವರಗಳನ್ನು ಪ್ರಚುರಪಡಿಸುವುದು.<br><br>ಗರಿಷ್ಟ ಅಂಕಗಳು - 2 | ಮಾಹಿತಿ ಹಕ್ಕು ಅಧಿನಿಯಮ 2005 ರನ್ವಯ ಸಾರ್ವಜನಿಕ ಮಾಹಿತಿ ಅಧಿಕಾರಿಗಳ ವಿವರಗಳನ್ನು ಗ್ರಾಮ ಪಂಚಾಯತಿ ಕಛೇರಿ ಗೋಡೆ ಅಥವಾ ಫಲಕದ ಮೇಲೆ ಬರೆಯಿಸಲಾಗಿದೆಯೇ?<br>ಹೌದು – 1, ಇಲ್ಲ – 0<br>ಸಕಾಲ ಸೇವೆಗಳ ವಿವರಗಳನ್ನು ಗ್ರಾಮ ಪಂಚಾಯತಿ ಕಛೇರಿ ಗೋಡೆ ಅಥವಾ ಫಲಕದ ಮೇಲೆ ಬರೆಯಿಸಲಾಗಿದೆಯೇ?<br>ಹೌದು – 1, ಇಲ್ಲ – 0 |
| 28 | ಗ್ರಾಮ ಪಂಚಾಯತಿಯಿಂದ ದೊರಕುವ ಸೇವೆಗಳನ್ನು ಸಾರ್ವಜನಿಕರಿಗೆ ಪಾರದರ್ಶಕವಾಗಿ ಲಭ್ಯವಾಗುವಂತೆ ಪ್ರಚುರಪಡಿಸುವುದು.<br><br>ಗರಿಷ್ಟ ಅಂಕಗಳು - 4 | ಗ್ರಾಮ ಪಂಚಾಯತಿಯಿಂದ ದೊರಕುವ ಸೇವೆಗಳ ನಾಗರಿಕ ಸನ್ನದು ತಯಾರಿಸಲಾಗಿದೆಯೇ?<br>ಹೌದು – 2, ಇಲ್ಲ – 0<br>ನಾಗರಿಕ ಸನ್ನದು ರೂಪದಲ್ಲಿ ಗ್ರಾಮ ಪಂಚಾಯತಿ ಕಛೇರಿ ಗೋಡೆ ಅಥವಾ ಫಲಕದ ಮೇಲೆ ಬರೆಯಿಸಲಾಗಿದೆಯೇ?<br>ಹೌದು – 1, ಇಲ್ಲ – 0<br>ಗ್ರಾಮ ಪಂಚಾಯತಿಯಿಂದ ದೊರಕುವ ಸೇವೆಗಳ ನಾಗರಿಕ ಸನ್ನದನ್ನು ಪಂಚತಂತ್ರ ತಂತ್ರಾಂಶದಲ್ಲಿ ಅಳವಡಿಸಲಾಗಿದೆಯೇ?<br>ಹೌದು – 1, ಇಲ್ಲ – 0 |

| | | |
|---|---|---|
| 29 | 2017-18 ನೇ ಸಾಲಿಗೆ ಮಾಹಿತಿ ಹಕ್ಕು ಅಧಿನಿಯಮ 2005 ರನ್ವಯ 4(1)ಎ ಮತ್ತು 4(1)ಬಿ ಗಳನ್ನು ಸಾರ್ವಜನಿಕವಾಗಿ ಪ್ರಕಟಿಸುವುದು.<br><br>ಗರಿಷ್ಟ ಅಂಕಗಳು - 4 | 2017-18 ನೇ ಸಾಲಿಗೆ ಮಾಹಿತಿ ಹಕ್ಕು ಅಧಿನಿಯಮ 2005 ರನ್ವಯ 4(1)ಎ ಮತ್ತು 4(1)ಬಿ ಗಳನ್ನು ತಯಾರಿಸಲಾಗಿದೆಯೇ?<br>ಹೌದು – 2, ಇಲ್ಲ - 0 |
| | | 4(1)ಎ ಮತ್ತು 4(1)ಬಿ ಗಳನ್ನು ಗ್ರಾಮ ಪಂಚಾಯತಿ ಕಛೇರಿ ಗೋಡೆ ಅಥವಾ ಫಲಕದ ಮೇಲೆ ಬರೆಯಿಸಲಾಗಿದೆಯೇ?<br>ಹೌದು – 1, ಇಲ್ಲ – 0 |
| | | 4(1)ಎ ಮತ್ತು 4(1)ಬಿ ಗಳನ್ನು ಪಂಚಂತ್ರ ತಂತ್ರಾಂಶದಲ್ಲಿ ಅಳವಡಿಸಲಾಗಿದೆಯೇ?<br>ಹೌದು – 1, ಇಲ್ಲ – 0 |
| 30 | ಗ್ರಾಮ ಪಂಚಾಯತಿ ಸಿಬ್ಬಂದಿಗಳ ಸೇವಾ ಭದ್ರತೆ.<br><br>ಗರಿಷ್ಟ ಅಂಕಗಳು - 5 | ಗ್ರಾಮ ಪಂಚಾಯತಿ ಸಿಬ್ಬಂದಿಗಳಿಗೆ ಕಾರ್ಮಿಕ ಇಲಾಖೆಯ ಅಧಿಸೂಚನೆಯಂತೆ ಕನಿಷ್ಟ ವೇತನ ಮತ್ತು ತುಟ್ಟಿಭತ್ಯೆಗಳನ್ನು ಪಾವತಿಸಲಾಗುತ್ತಿದೆಯೇ?<br>ಹೌದು – 1, ಇಲ್ಲ - 0 |
| | | ಗ್ರಾಮ ಪಂಚಾಯತಿಯು ತನ್ನ ನೌಕರರಿಗೆ ನೇಮಕ ಮಾಡಿಕೊಂಡಿರುವುದಕ್ಕೆ ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಅನುಮೋದನೆ ಪಡೆಯಲಾಗಿದೆಯೇ?<br>ಹೌದು – 1, ಇಲ್ಲ - 0 |
| | | ಗ್ರಾಮ ಪಂಚಾಯತಿಯು ತನ್ನ ನೌಕರರಿಗೆ ಭವಿಷ್ಯ ನಿಧಿ ಯೋಜನೆ ಮತ್ತು ವಿಮಾ ಸೌಲಭ್ಯ ಕಲ್ಪಿಸಲಾಗಿದೆಯೇ?<br>ಹೌದು – 1, ಇಲ್ಲ - 0 |
| | | ಗ್ರಾಮ ಪಂಚಾಯತಿಯು ತನ್ನ ನೌಕರರಿಗೆ ನಿವೃತ್ತಿ ಉಪದಾನ ಸೌಲಭ್ಯ ಕಲ್ಪಿಸಲಾಗಿದೆಯೇ?<br>ಹೌದು – 1, ಇಲ್ಲ - 0 |
| | | ಗ್ರಾಮ ಪಂಚಾಯತಿ ಸಿಬ್ಬಂದಿಗಳ ಸೇವಾ ಪುಸ್ತಕಗಳನ್ನು ನಿರ್ವಹಣೆ ಮಾಡಲಾಗಿದೆಯೇ?<br>ಹೌದು – 1, ಇಲ್ಲ – 0 |
| 31 | ಗ್ರಾಮ ಪಂಚಾಯತಿ ಕಛೇರಿಗೆ IP based ಸಿಸಿಟಿವಿ ಅಳವಡಿಕೆ.<br><br>ಗರಿಷ್ಟ ಅಂಕಗಳು – 4 | ಗ್ರಾಮ ಪಂಚಾಯತಿ ಕಛೇರಿಗೆ IP based ಸಿಸಿಟಿವಿ ಅಳವಡಿಸಲಾಗಿದೆಯೇ?<br>ಹೌದು – 2, ಇಲ್ಲ – 0 |
| | | IP based ಸಿಸಿಟಿವಿ ವಿವರಗಳನ್ನು ಪಂಚತಂತ್ರ ತಂತ್ರಾಂಶದಲ್ಲಿ ಅಳವಡಿಸಲಾಗಿದೆಯೇ?<br>ಹೌದು – 2, ಇಲ್ಲ – 0 |

| | | |
|---|---|---|
| 32 | ಉಪಕರಗಳು<br><br>ಗರಿಷ್ಟ ಅಂಕಗಳು – 4 | ಗ್ರಾಮ ಪಂಚಾಯತಿಗಳು ಭೂಮಿ ಮತ್ತು ಕಟ್ಟಡಗಳ ಮೇಲೆ ಸಂಗ್ರಹಿಸುವ ತೆರಿಗೆ ಮೊತ್ತದ ಮೇಲೆ ವಿಧಿಸುವ ಉಪಕರಗಳ ಮೊತ್ತವನ್ನು ಕಟಾಯಿಸಲಾಗಿದೆಯೇ?<br>ಹೌದು – 2, ಇಲ್ಲ – 0 |
| | | ಕಟಾಯಿಸಲಾದ ಉಪಕರಗಳ ಮೊತ್ತವನ್ನು ಸಂಬಂಧಿಸಿದ ಇಲಾಖೆಗಳಿಗೆ ಪಾವತಿಸಲಾಗಿದೆಯೇ?<br>ಹೌದು – 2, ಇಲ್ಲ – 0 |
| 33 | ಇ-ಸ್ವತ್ತು ತಂತ್ರಾಂಶದಡಿ ಆಸ್ತಿ ನಮೂನೆಗಳ ವಿತರಣೆ.<br><br>ಗರಿಷ್ಟ ಅಂಕಗಳು – 2 | ಇ-ಸ್ವತ್ತು ತಂತ್ರಾಂಶದಡಿ ಆಸ್ತಿ ನಮೂನೆಗಳ ವಿತರಣೆ ಸಕಾಲದಲ್ಲಿ ಮಾಡಲಾಗಿದೆಯೇ?<br>ಹೌದು – 1, ಇಲ್ಲ – 0 |
| | | ಇ-ಸ್ವತ್ತು ತಂತ್ರಾಂಶದ ಫೀಫೋ (FIFO) ಅಡಿ ಆಸ್ತಿ ನಮೂನೆಗಳನ್ನು ಸಮರ್ಪಕವಾಗಿ ವಿತರಣೆ ಮಾಡಲಾಗಿದೆಯೇ?<br>ಹೌದು – 1, ಇಲ್ಲ – 0 |
| 34 | ಗ್ರಾಮ ಪಂಚಾಯತಿ ಆಡಳಿತದಲ್ಲಿ ವಿನೂತನ ಉಪಕ್ರಮಗಳು (ಉದಾಹರಣೆಗೆ:, ವೈಫೈ, ಕುಂದು, ಸೋಲಾರ್ ಬೀದಿ ದೀಪ ಅಳವಡಿಕೆ, ಸಾಮಾಜಿಕ ಭದ್ರತಾ ಯೋಜನೆಯಡಿ ಅರ್ಹರಿಗೆ ಭದ್ರತೆ ಕಲ್ಪಿಸಿರುವುದು, ಗ್ರಾಮ ಪಂಚಾಯತಿಯ ಟಿವಿ ಚಾನಲ್, ಸಂಪೂರ್ಣ ವಿಮಾದಾರರ ಗ್ರಾಮ, ಹೊಗೆ ಮುಕ್ತ ಗ್ರಾಮ, ಸಂಪೂರ್ಣ ಬ್ಯಾಂಕ್ ಖಾತೆ ಹೊಂದಿರುವವರ ಗ್ರಾಮ, ಡಿಜಿಟಲ್ ವಿಲೇಜ್, ಕುಡಿಯುವ ನೀರಿನ ಕೊಳಾಯಿಗೆ ಮೀಟರ್ ಅಳವಡಿಕೆ, ಇತರೆ.)<br><br>ಗರಿಷ್ಟ ಅಂಕಗಳು – 14 | ನಗದು ರಹಿತ ವಹಿವಾಟು<br>ಹೌದು – 2, ಇಲ್ಲ – 0 |
| | | ಕುಂದು ಕೊರತೆ ನಿವಾರಣೆಗೆ ವ್ಯವಸ್ಥೆ<br>ಹೌದು – 2, ಇಲ್ಲ – 0 |
| | | ವೈಫೈ ಅಳವಡಿಕೆ<br>ಹೌದು – 2, ಇಲ್ಲ – 0 |
| | | ಗ್ರಾಮ ಪಂಚಾಯತಿ ಸಭೆಗಳನ್ನು ಸ್ಥಳೀಯ ಟಿ.ವಿ. ಚಾನಲ್ ಗಳಲ್ಲಿ ಪ್ರಸಾರದ ವ್ಯವಸ್ಥೆ<br>ಹೌದು – 2, ಇಲ್ಲ – 0 |
| | | ಕುಡಿಯುವ ನೀರಿನ ಕೊಳಾಯಿಗೆ ಮೀಟರ್ ಅಳವಡಿಕೆ<br>ಹೌದು – 2, ಇಲ್ಲ – 0 |
| | | ಹೊಗೆ ಮುಕ್ತ ಗ್ರಾಮ ಪಂಚಾಯತಿ<br>ಹೌದು – 2, ಇಲ್ಲ – 0 |
| | | ಸಂಪೂರ್ಣ ಸಾಕ್ಷರತಾ ಗ್ರಾಮ ಪಂಚಾಯತಿ<br>ಹೌದು – 2, ಇಲ್ಲ – 0 |

ಒಟ್ಟು ಪ್ರಶ್ನೆಗಳು – 34
ಒಟ್ಟು ಅಂಕಗಳು – 150

(ಎಂ.ಕೆ.ಕೆಂಪೇಗೌಡ)
ನಿರ್ದೇಶಕರು(ಪಂ.ರಾಜ್-1) ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.